ಅವನನ್ನು ಮಸೂರಿಯಲ್ಲಿ ತಾತನೊಂದಿಗೆ ಇರಲು ಕಳುಹಿಸಿದರು.

ತಾತ ಓರ್ವ ನಿವೃತ್ತ ವಲಯ ಅರಣ್ಯಾಧಿಕಾರಿಯಾಗಿದ್ದರು. ಊರಿನ ಹೊರಗೆ ಅವರಿಗೆ ಸಣ್ಣ ಮನೆಯಿತ್ತು.

ಅವನು ಚೆರ್ರಿ ಹಣ್ಣನ್ನು ಕೊಂಡಾಗ ರಾಕೇಶ ಶಾಲೆಯಿಂದ ಮನೆಗೆ ಹಿಂತಿರುಗುತ್ತಿದ್ದ. ಒಂದು ಗೊಂಚಲಿಗೆ ಅವನು ಐವತ್ತು ಪೈಸೆ ನೀಡಿದ್ದ. ಮನೆಗೆ ಹೋಗಲು ಅವನಿಗೆ ಸುಮಾರು ಅರ್ಧ ಗಂಟೆ ಹಿಡಿಯಿತು. ಅವನು ಮನೆ ತಲುಪುವ ಹೊತ್ತಿಗೆ ಅವನಲ್ಲಿ ಮೂರು ಚೆರ್ರಿಗಳು ಮಾತ್ರ ಮಿಕ್ಕಿತ್ತು.

'ತಾತ, ತೊಗೋ ಒಂದು ಚೆರ್ರಿ' ಎಂದು ಹೇಳಿದ, ತೋಟದಲ್ಲಿ ತನ್ನ ತಾತನನ್ನು ನೋಡಿದಾಗ. ತಾತ ಒಂದು ಚೆರ್ರಿ ಹಣ್ಣನ್ನು ತೆಗೆದು ಕೊಂಡಾಗ ರಾಕೇಶ ಮಿಕ್ಕ ಎರಡನ್ನು ತಿನ್ನತೊಡಗಿದ. ಕೊನೆಯ ಬೀಜವನ್ನು ತನ್ನ ಬಾಯಿಯಲ್ಲಿ ಸ್ವಲ್ಪ ಹೊತ್ತು ಇಟ್ಟುಕೊಂಡ. ಬಾಯಲ್ಲಿ ಚೀಪುತ್ತ ರಸ ಎಲ್ಲಾ ಹೀರುವವರೆಗೆ ಮತ್ತೆ ಅವನು ಬೀಜವನ್ನು ಅಂಗೈ ಮೇಲಿಟ್ಟುಕೊಂಡು ಪರೀಕ್ಷಿಸಿದ.

'ಈ ಚೆರ್ರಿ ಬೀಜಗಳು ಅದೃಷ್ಟ ಮಾಡಿವೆಯೇ?' ರಾಕೇಶ ಕೇಳಿದ.

'ಹೌದು!'

'ಹಾಗಾದ್ರೆ ನಾನೇ ಅದನ್ನಿಟ್ಟುಕೊಳ್ತೀನಿ'.

'ನೀನು ಅದನ್ನು ಹಾಗೇ ಇಟ್ಟುಕೊಂಡರೆ ಯಾವುದೂ ಅದೃಷ್ಟವನ್ನು ತರಲ್ಲ. ನಿನಗೆ ಅದೃಷ್ಟ ಬೇಕಾದರೆ ಅದನ್ನು ಸರಿಯಾಗಿ ಉಪಯೋಗಿಸಬೇಕು'.

'ಬೀಜದಿಂದ ನಾನೇನು ಮಾಡಬಹುದು?'

ಅದಕ್ಕೆ ರಾಕೇಶ ಒಂದು ಸಣ್ಣ ಗುದ್ದಲಿಯನ್ನು ಹುಡುಕಿ, ಗಿಡ ನೆಡಲು ಪಾತಿ ತೋಡಿದ.

'ಏಯ್, ಅಲ್ಲಲ್ಲ, ತಾತ ಕೂಗಿಕೊಂಡರು, ನಾನು ಆ ಪಾತಿಯಲ್ಲಿ ಸಾಸಿವೆ ಬಿತ್ತಿದೀನಿ. ಇದನ್ನು ಆ ಮೂಲೆಯಲ್ಲಿ ನೆಡು, ಅಲ್ಲಿ ಯಾರೂ ತುಳಿಯಲ್ಲ'.

ನೆಲ ಮೆತ್ತಗೆ, ಗಿಡ ಬರಬಹುದಾದ ಮೂಲೆಗೆ ರಾಕೇಶ ಹೋದ, ಅಲ್ಲಿ ಅಗೆಯ ಬೇಕಾಗಿರಲಿಲ್ಲ. ಅವನು ತನ್ನ ಹೆಬ್ಬೆಟ್ಟಿನಿಂದ ಮಣ್ಣನ್ನು ಒತ್ತಿದ. ಅದು ಒಳಗೆ ಹೋಯಿತು. ನಂತರ ಊಟ ಮಾಡಿದ ಗೆಳೆಯರೊಂದಿಗೆ ಕ್ರಿಕೆಟ್ ಆಡಲು ಓಡಿದ, ಚೆರ್ರಿಯ ಬೀಜದ ಬಗ್ಗೆ ಎಲ್ಲಾ ಮರೆತೇ ಬಿಟ್ಟ.

ಚಳಿಗಾಲದ ಸಮಯದಲ್ಲಿ ಹಿಮದಿಂದ ತಂಗಾಳಿ ಬೀಸುತ್ತಿತ್ತು. ದೇವಧಾರು ಮರಗಳ ಮೇಲೆ ತೋಟವೆಲ್ಲಾ ಪೂರಾ ಒಣಗಿತ್ತು. ಸಂಜೆ ಹೊತ್ತಿನಲ್ಲಿ ತಾತ ಮತ್ತು ರಾಕೇಶ ಇಬ್ಬರೂ ಇದ್ದಲು ಒಲೆಯ ಬಳಿ ಕುಳಿತುಕೊಳ್ಳುತ್ತಿದ್ದರು. ತಾತ ರಾಕೇಶನಿಗೆ ಕತೆಗಳನ್ನು ಹೇಳುತ್ತಿದ್ದರು. ಪ್ರಾಣಿಗಳಾಗಿ ಬದಲಾದ ಕತೆಗಳನ್ನು ದೆವ್ವಗಳಾಗಿ ಮರದಲ್ಲಿ ವಾಸಿಸುತ್ತಿದ್ದವರ ಕತೆಗಳನ್ನು, ಕಣ್ಣೀರು ಸುರಿಸಿದ ಕತೆಗಳನ್ನು. ಅದಕ್ಕೆ ಪ್ರತಿಯಾಗಿ ರಾಕೇಶ ವೃತ್ತ ಪತ್ರಿಕೆಗಳನ್ನು ಓದಿ ಹೇಳುತ್ತಿದ್ದ, ತಾತನ ಕಣ್ಣುಗಳು ದುರ್ಬಲವಾಗಿದ್ದುದರಿಂದ. ರಾಕೇಶನಿಗೆ ವೃತ್ತ ಪತ್ರಿಕೆಗಳ ಸುದ್ದಿ ಬೇಸರ ತರಿಸುತ್ತಿತ್ತು, ಅದರಲ್ಲೂ ಕತೆಗಳನ್ನು ಕೇಳಿದ ನಂತರ. ಆದರೆ ತಾತನಿಗೆ ಎಲ್ಲಾ ತರಹದ ಸುದ್ದಿ ಬೇಕಾಗಿತ್ತು.

ಬಾತು ಕೋಳಿಗಳು ಉತ್ತರ ದಿಕ್ಕಿನ ಸೈಬೀರಿಯಾಗೆ ಹಾರಿದಾಗ ಅದು ವಸಂತ ಮಾಸವೆಂದು ತಿಳಿದಿದ್ದರು. ಬೆಳ್ಳಂಬೆಳಿಗ್ಗೆ, ಅವನು ಸೌದೆ ಕಡಿದು ಬೆಂಕಿ ಹೊತ್ತಿಸಲು ಎದ್ದಾಗ, ಉತ್ತರದ ಕಡೆಗೆ ಗಿ ಆಕಾರವನ್ನು ಪರ್ವತದ ಗಾಳಿಯಲ್ಲಿ ಹಕ್ಕಿಗಳ ಗಾನವನ್ನು ಕೇಳಿಸಿಕೊಂಡ.

ಒಂದು ದಿನ ಬೆಳಗ್ಗೆ ಅವನು ತೋಟದಲ್ಲಿ ಕೊಂಬೆಯೊಂದನ್ನು ತೆಗೆದುಕೊಳ್ಳಲು ಬಾಗಿದಾಗ ಅದು ಅಲ್ಲಿ ಬೇರು ಬಿಟ್ಟಿದ್ದನ್ನು ಕಂಡು ಆಶ್ಚರ್ಯಗೊಂಡ. ಅದರ ಕಡೆಗೆ ಒಂದು ಕ್ಷಣ ದಿಟ್ಟಿಸಿ ನೋಡಿ ತಾತನನ್ನು ಕರೆಯಲು ಓಡಿದ. 'ದಾದಾ, ಬನ್ನಿ, ನೋಡಿ, ಚೆರ್ರಿ ಮರ ಬೆಳೆದಿದೆ !'

'ಚೆರ್ರಿ ಮರ ಯಾವುದದು?' ಅದರ ಬಗ್ಗೆ ಮರೆತೇ ಬಿಟ್ಟಿದ್ದ ತಾತ ಕೇಳಿದರು.

'ಕಳೆದ ವರ್ಷ ನಾವು ನೆಟ್ಟಿದ್ವಲ್ಲಾ ಬೀಜ, ನೋಡಿ ಬನ್ನಿ ಅದು ಬೆಳೆದಿದೆ' ಎಂದ ರಾಕೇಶ ನೀಳವಾಗಿ ಬಾಗಿದ, ಚಿಕ್ಕ ಮರದ ಕಡೆ ತಾತ ನೋಡಿದರು. ಅದಾಗಲೇ ನಾಲ್ಕು ಅಂಗುಲ ಎತ್ತರವಾಗಿತ್ತು.

'ಹೌದು ಅದು ಚೆರ್ರಿ ಮರವೇ! ನೀನು ಅದಕ್ಕೆ ಆವಾಗಾವಾಗ ನೀರು ಹಾಕುತ್ತಿರಬೇಕು' ಎಂದರು.

ರಾಕೇಶ ಒಳಗೆ ಓಡಿಹೋಗಿ ಬಕೆಟ್‌ನಲ್ಲಿ ನೀರನ್ನು ತಂದ.

'ಅದು ಮುಳುಗುವಷ್ಟು ನೀರು ಹಾಕಬೇಡ' ತಾತ ಹೇಳಿದರು.

ರಾಕೇಶ ಅದಕ್ಕೆ ನೀರು ಚಿಮುಕಿಸಿದ. ಸಣ್ಣ ಕಲ್ಲುಗಳಿಂದ ವೃತ್ತಾಕಾರದಲ್ಲಿ ಜೋಡಿಸಿದ ಕಲ್ಲುಗಳೇಕೆ? ತಾತ ಕೇಳಿದರು, ಒಪ್ಪವಾಗಿರಲಿ ಅಂತ ರಾಕೇಶ ಉತ್ತರಿಸಿದ.

ಅವನು ಪ್ರತಿದಿನ ಆ ಮರದ ಕಡೆ ನೋಡುತ್ತಿದ್ದ ಆದರೆ ಅದು ಬೇಗ ಬೆಳೆದಂತೆ ಕಾಣಲಿಲ್ಲ. ಹಾಗಾಗಿ ಅದರ ಕಡೆ ನೋಡುವುದನ್ನೇ ಬಿಟ್ಟು ಬಿಟ್ಟ, ಎಲ್ಲೋ ಒಮ್ಮೊಮ್ಮೆ ತನ್ನ ಕಣ್ಣಿನಂಚಿನಿಂದ ಒಂದೆರಡು ವಾರಗಳ ನಂತರ ಅದನ್ನು ಸರಿಯಾಗಿ ವೀಕ್ಷಿಸಿದ ನಂತರ ಅದು ಮೇಲಕ್ಕೆ ಬೆಳೆದಿದೆಯೆಂದು ಗೊತ್ತಾಯಿತು. ಒಂದು ಅಂಗುಲದಷ್ಟು !

ಆ ವರ್ಷ ಮಳೆಗಾಲ ಬೇಗ ಆರಂಭವಾಯಿತು. ರಾಕೇಶ ಸ್ಕೂಲಿಗೆ ರೈನ್ ಕೋಟ್ ಮತ್ತು ಗಂ ಬೂಟ್ಸ್‌ನಲ್ಲೇ ಹೋಗಿ ಬರುತ್ತಿದ್ದ ಮರಗಳ ಕಾಂಡದಿಂದ ಚಿಗುರು ಹೊಮ್ಮಿ ಉದ್ದನೆಯ ಹುಲ್ಲಿನಲ್ಲಿ ವಿಚಿತ್ರ ಮಾದರಿ ನೈದಿಲೆಗಳಾಗಿ ಕಾಣಿಸಿಕೊಂಡವು. ಅಲ್ಲದೆ, ಮಳೆ ಇಲ್ಲದ ಸಮಯದಲ್ಲೂ ಮರಗಳಿಂದ ನೀರು ತೊಟ್ಟಿಕ್ಕುತ್ತಿತ್ತು.

ಹಿಮ ಕಣಿವೆಯನ್ನಾವರಿಸಿತು. ಅದೇ ಋತುವಿನಲ್ಲೇ ಚೆರ್ರಿ ಮರವೂ ಬೇಗನೆ ಬೆಳೆಯಿತು.

ಅದು ಸುಮಾರು ಎರಡು ಅಡಿ ಎತ್ತರ ಬೆಳೆದಿದ್ದಾಗ ಮೇಕೆಯೊಂದು ತೋಟಕ್ಕೆ ನುಗ್ಗಿ ಎಲೆಗಳನ್ನೆಲ್ಲಾ ತಿಂದು ಹಾಕಿತು. ಮುಖ್ಯವಾದ ಕಾಂಡ ಹಾಗೂ ಎರಡು ತೆಳ್ಳಗಿನ ರಂಬೆಗಳು ಮಾತ್ರ ಉಳಿದಿತ್ತು.

'ಪರವಾಯಿಲ್ಲಾ'ರಾಕೇಶ ಬೇಸರ ಹೊಂದಿದ್ದನ್ನು ಕಂಡು ತಾತ ಹೇಳಿದರು.

'ಅದು ಮತ್ತೆ ಬೆಳೆಯುತ್ತೆ. ಚೆರ್ರಿ ಮರಗಳು ಗಡುಸು'

ಮಳೆಗಾಲದ ಕೊನೆಗೆ ಹೊಸ ಎಲೆಗಳು ಮರದಲ್ಲಿ ಕಾಣಿಸಿಕೊಂಡವು. ಆಗ ಓರ್ವ ಹೆಂಗಸು, ಹುಲ್ಲು ಕತ್ತರಿಸುವವಳು ಬೆಟ್ಟದಿಳಿಜಾರಿನಲ್ಲಿ ಬಂದು ಅವಳ ಕೊಡಲಿಯಿಂದ ಮಳೆಗಾಲದ ಹಸುರನ್ನು ಕತ್ತರಿಸುತ್ತಾ ಬಂದಳು, ಆದರೆ ಅವಳು ಮರ ಕಡಿಯುವುದನ್ನು ತಪ್ಪಿಸಲಾಗಲಿಲ್ಲ. ಒಂದೇ ಏಟಿಗೆ ಚೆರ್ರಿ ಮರ ಎರಡು ಭಾಗವಾಗಿ ಕತ್ತರಿಸಲ್ಪಟ್ಟಿತು.

ಅಲ್ಲಿ ಏನಾಗಿತ್ತು ಎಂದು ತಾತ ನೋಡಿ ಆ ಹೆಂಗಸಿನ ಹತ್ತಿರ ಹೋಗಿ ಅವಳನ್ನು ಬೈದರು. ಆದರೆ ನಷ್ಟವನ್ನು ತುಂಬಿಸಲು ಸಾಧ್ಯವಾಗಲಿಲ್ಲ. ರಾಕೇಶ ಅಂದುಕೊಂಡ ಅದು ಸತ್ತೇ ಹೋಗ ಬಹುದು. ತಾತನೂ ಹೇಳಿದರು ಬಹುಶಃ ಆದರೆ ಚೆರ್ರಿ ಮರಕ್ಕೆ ಸಾಯುವ ಉದ್ದೇಶವಿರಲಿಲ್ಲ. ಬೇಸಿಗೆ ಬರುವ ಹೊತ್ತಿಗೆ ಅದು ಹೊಸ ಚಿಗುರನ್ನು ಹಸುರೆಲೆಗಳ ಮೂಲಕ ಕಳುಹಿಸಿತು. ರಾಕೇಶನೂ ಎತ್ತರವಾಗಿ ಬೆಳೆದಿದ್ದ. ಅವನಿಗೀಗ ಎಂಟು ವರ್ಷ, ಗುಂಗುರು ಕೂದಲಿನ ಚುರುಕು ಹುಡುಗ ಕಪ್ಪು ಕಣ್ಣುಗಳು ಬ್ಲಾಕ್ ಬರ್ರಿ ಕಣ್ಣುಗಳು ಎಂದು ತಾತ ಕರೆಯುತ್ತಿದ್ದರು.

ಆ ಮಳೆಗಾಲ ರಾಕೇಶ ತನ್ನ ಹಳ್ಳಿ ಮನೆಗೆ ಹೋದ ಅವರಪ್ಪ ಅಮ್ಮನಿಗೆ ಕಳೆ ಕಿತ್ತು, ಬಿತ್ತು ನೆಡುವುದರಲ್ಲಿ ಸಹಾಯ ಮಾಡಲು. ಆದರೆ ಅವನು ಮಳೆಯೆಲ್ಲಾ ಕಳೆದ ಮೇಲೆ ತಾತನ ಮನೆಗೆ ಮರಳಿದಾಗ ನೋಡಿದರೆ ಚೆರ್ರಿ ಮರ ಮತ್ತೊಂದು ಅಡಿ ಬೆಳೆದು ಅವನ ಎದೆ ಮಟ್ಟಕ್ಕೆ ಬಂದಿತ್ತು. ಮಳೆ ಬರುತ್ತಿದ್ದಾಗಲೂ ರಾಕೇಶ ಕೆಲವೊಮ್ಮೆ ಮರಕ್ಕೆ ನೀರು ಹಾಕುತ್ತಿದ್ದನು. ತಾನು ಬಂದಿರುವುದನ್ನು ಅದಕ್ಕೆ ನೆನಪಿಸಲು.

ಒಂದು ದಿನ ಅವನು ಅದರ ಕೊಂಬೆಯೊಂದರ ಮೇಲೆ ಹಸಿರು ಹಾಸನ್ನು ಕಂಡ ಅದು ಹಾಗೇ ಇರಲು ಬಿಟ್ಟ ರಾಕೇಶ ಅದು ಚೆರ್ರಿ ಮರಕ್ಕೆ ಭೇಟಿ ಕೊಟ್ಟ ಮೊದಲಿಗನಾಯಿತು.

ನಂತರ ಭೇಟಿ ಕೊಟ್ಟವರು ದಟ್ಟ ಕೂದಲು ಉಳ್ಳ ಕಂಬಳಿ ಹುಳ ಎಲೆಗಳನ್ನು ಸ್ವಾಹ ಮಾಡುತ್ತಿತ್ತು. ರಾಕೇಶ ಅದನ್ನು ತೆಗೆದು ತರಗೆಲೆಗಳ ರಾಶಿಯ ಮೇಲೆ ಎಸೆದ. ನೀನು ಚಿಟ್ಟೆಯಾದಾಗ ಬಾ ಎಂದು ಹೇಳಿದ.

ಚಳಿಗಾಲ ಬೇಗನೆ ಸಮೀಪಿಸಿತು. ಮಂಜಿನ ಭಾರದಿಂದಾಗಿ ಚೆರ್ರಿ ಗಿಡ ಕಳಕ್ಕೆ ಬಾಗಿತು ಜಮೀನಿನಲ್ಲಿ ಓಡಾಡುತ್ತಿದ್ದ ಇಲಿಗಳು ಮನೆಯ ಮೇಲ್ಛಾವಣಿಯಲ್ಲಿ ಆಶ್ರಯ ಪಡೆದವು. ಕಣಿವೆಯ ದಾರಿಯೆಲ್ಲಾ ಮುಚ್ಚಲ್ಪಟ್ಟು ಅನೇಕ ದಿನಗಳವರೆಗೆ ಯಾವುದೇ ವೃತ್ತಪತ್ರಿಕೆಯಿರಲ್ಲಿಲ್ಲ. ಅದರಿಂದ ತಾತನಿಗೆ ಇರಿಸು ಮುರಿಸಾಯಿತು. ಅವರ ಕತೆಗಳು ನೋವಿನಿಂದ ಅಂತ್ಯಗೊಳ್ಳಲಾರಂಭಿಸಿದವು.

ಫೆಬ್ರವರಿಯಲ್ಲಿ ರಾಕೇಶನ ಹುಟ್ಟುಹಬ್ಬ ಬಂದಿತು. ಅವನೀಗ ಒಂಭತ್ತು ವರ್ಷದವನು. ಚೆರ್ರಿ ಗಿಡಕ್ಕೆ ನಾಲ್ಕು ವರ್ಷ ಆದರೆ ಅದಾಗಲೇ ರಾಕೇಶನಷ್ಟು ಎತ್ತರ ಬೆಳೆದಿತ್ತು.

ಒಂದು ಬೆಳಗ್ಗೆ ಸೂರ್ಯನ ಬಿಸಿಲು ಹೊಮ್ಮಿದಾಗ ತಾತ ತೋಟದೊಳಕ್ಕೆ